(ಇಂದು ದಿನಾಂಕಃ **10-09-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು ಶ್ರೀ ವಿ ಟಿ ಕೆ ವಕೀಲರಿಂದಃ**

ನಮ್ಮ ಕುಟುಂಬದ ಮೂಲ ಪುರುಷ ಕೃಷ್ಣರಡ್ಡಿ ಎಂದರೆ ಸರಿ. ಸದರಿಯವರಿಗೆ ಮಲ್ಲರಡ್ಡಿ ಹಾಗೂ ಬಸವರಡ್ಡಿ ಎನ್ನುವ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಬಸವರಡ್ಡಿಯವರ ಹೆಂಡತಿ ಹೆಸರು ವೆಂಕಮ್ಮ ಎಂದರೆ ಸರಿ. ಸದರಿಯವರಿಬ್ಬರಿಗೆ ತಿಮ್ಮರಡ್ಡಿ ಹಾಗೂ ಹೆಮರಡ್ಡಿ ಎನ್ನುವ ಇಬ್ಬರು ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ಮಲ್ಲರಡ್ಡಿಯವರಿಗೆ ತುಳಸವ್ವ ಎನ್ನುವ ಹೆಂಡತಿ ಇದ್ದರು ಎಂದರೆ ಸರಿ. ಸದರಿಯವರಿಬ್ಬರಿಗೆ ಶಿವರಡ್ಡಿ, ಕೃಷ್ಣರಡ್ಡಿ, ಯಲ್ಲರಡ್ಡಿ, ದೇವರಡ್ಡಿ, ಹನಮರಡ್ಡಿ, ಧರ್ಮರಡ್ಡಿ ಹಾಗೂ ಕಾಶವ್ವ ಎನ್ನುವ ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ಸದರಿಯವರ ಪೈಕಿ ಶಿವರಡ್ಡಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರ ಒಬ್ಬನೇ ಮಗನ ಹೆಸರು ಹೆಮರಡ್ಡಿ ಎಂದರೆ ಸರಿ. ಸದರಿಯವರ ಪೈಕಿ ಕೃಷ್ಣರಡ್ಡಿ ಯು ಸಹ ಮೃತ ಪಟ್ಟಿದ್ದು ಸದರಿಯವರಿಗೆ ಭೀಮರಡ್ಡಿ, ಗೋವಿಂದರಡ್ಡಿ ಹಾಗೂ ಹನಮರಡ್ಡಿ ಎನ್ನುವ ಮಕ್ಕಳು ಇದ್ದಾರೆ ಎಂದರೆ ಸರಿ. ದೇವರಡ್ಡಿಯು ಸಹ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಕೋಪರಡ್ಡಿ, ಶೇಕರಡ್ಡಿ ಹಾಗೂ ಸೀತವ್ವ ಎನ್ನುವ ಮಕ್ಕಳು ಇರುತ್ತಾರೆ ಎಂದರೆ ಸರಿ. ಹನಮರಡ್ಡಿ, ಧರ್ಮರಡ್ಡಿ ಹಾಗೂ ಕಾಶವ್ವ ಜೀವಂತ ಇದ್ದಾರೆ ಎಂದರೆ ಸರಿ.

2. ನನ್ನ ಮಗಳ ಹೆಸರು ಭಾರತಿ. ಸದರಿಯವರನ್ನು ನನ್ನ ತಮ್ಮನಿಗೆ ವಿವಾಹ ಮಾಡಿ ಕೊಡಲಾಗಿರುತ್ತದೆ. ನನ್ನ ಅಳಿಯ ರುದ್ರರಡ್ಡಿಯವರಿಗೆ ಜಮೀನು ಸರ್ವೇ ನಂಃ 37/1 ಕ್ಷೇತ್ರ 4 ಎಕರೆ 22 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ ನಂತರ ಸಾಕ್ಷಿಯು ಪುನಃ ನುಡಿಯುವುದೆಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಜಮೀನನ್ನು ನನ್ನ ಅಳಿಯ ಶಾಂತವ್ವ ಕೋಂ. ದ್ಯಾಮಣ್ಣ ಅಮರಗೋಳ ಇವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಯಲ್ಲರಡ್ಡಿ ರವರ ಹೆಸರಿನಲ್ಲಿ ಮ್ಯಾಸಿ ಟ್ಯಾಕ್ಟರ್ ಇದೆ ಎಂದರೆ ಸರಿ. ಸದರಿ ಟ್ಯಾಕ್ಟರನ್ನು ನನ್ನ ಅಳಿಯ ರುದ್ರರಡ್ಡಿ ಉಪಯೋಗಿಸುತ್ತಾರೆ ಎಂದರೆ ಸರಿ. ಸದರಿ ಟ್ಯಾಕ್ಟರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ತಂದೆ 2 ರಿಂದ 4 ನೇ ಪ್ರತಿವಾದಿಯರಿಗೆ ದಾನ ಪತ್ರ ಮೂಖಾಂತರ ಆಸ್ತಿಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ನಂತರ 3 ನೇ ಪ್ರತಿವಾದಿಯು ತನಗೆ ಬಂದ ಆಸ್ತಿಯನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕಾರಣ 3 ನೇ ಪ್ರತಿವಾದಿಗೆ ಆಸ್ತಿ ಕಡಿಮೆಯಾಗಿರುತ್ತದೆ ಎಂದರೆ ಸರಿ.

3. ನನ್ನ ತಂದೆ ಜೀವಂತವಿದ್ದಾಗ 3 ಎಕರೆ ಜಮೀನನ್ನು ನನ್ನ ಪಾಲಿಗೆಂದು ತೆಗೆದಿಟ್ಟಿದ್ದರು

ಎಂದರೆ ನನಗೆ ಗೊತ್ತಿಲ್ಲ. ನಂತರ ಪಾಲು ವಾಟ್ನಿಗೆಂದು ನನಗೆ ಕರೆದಾಗ ನಾನು ಸದರಿ ಜಮೀನನ್ನು 3 ನೇ ಪ್ರತಿವಾದಿಗೆ ಕೊಡಲು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ 3 ನೇ ಪ್ರತಿವಾದಿ ಸದರಿ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

4. ನಮ್ಮ ಕುಟುಂಬಕ್ಕೆ ಒಟ್ಟು ಎಷ್ಟು ಆದಾಯವಿದೆ ಎಂದು ಬರೆಸಿರುವುದಿಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆದಾಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು ತೋರಿಸಲು ಮೂಲ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿಗಳು ಯಲ್ಲರಡ್ಡಿಯವರು ಖರೀದಿಸಿದ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಯಲ್ಲರಡ್ಡಿಯವರು ದಾವಾ ಆಸ್ತಿಗಳನ್ನು ಭಕ್ಷೀಸು ಮಾಡಿದ್ದರು ಎಂದರೆ ಸರಿ. ಭಕ್ಷೀಸು ಪ್ರಕಾರ ಸದರಿಯವರ ಹೆಸರುಗಳು ಉತಾರಗಳಲ್ಲಿ ದಾಖಲಾಗಿರುತ್ತವೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಸದರಿ ಆಸ್ತಿಗಳನ್ನು ನಮ್ಮ ಹಿರಿಯರು ಗಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆ ಇದ್ದ ಕಾಲಕ್ಕೆ ಪಾಲು ವಿಭಾಗವಾಗಿತ್ತು ಎಂದರೆ ಸರಿಯಲ್ಲ. ನಮ್ಮದು ಜಂಟಿ ಕುಟುಂಬ ಎಂದು ತೋರಿಸಲು ರೇಷನ್ ಕಾರ್ಡ ಹಾಗೂ ಇತರೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಪಾಲು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು 3 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**